ದಿನಾಂಕಃ 13-12-2022
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- 4 ನೇ ಪ್ರತಿವಾದಿ ಪರ Sri K.B.ವಕೀಲರಿಂದಃ**

ನಾನು ಚಂದ್ರೇಗೌಡರವರನ್ನು ಸುಮಾರು 10 ವರ್ಷಗಳಿಂದ ನೋಡುತ್ತಿದ್ದೇನೆ. ದಾವಾ 2 ನೇ ಐಟಂ ಸ್ವತ್ತನ್ನು ತಾಃ 05-12-2001 ರಲ್ಲಿ 4 ನೇ ಪ್ರತಿವಾದಿಗೆ ನಾನು ಮತ್ತು ನನ್ನ ಸಹೋದರರು ಹಾಗೂ ನನ್ನ ಮಕ್ಕಳು ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಸದರಿ ಸ್ವತ್ತನ್ನು 4 ನೇ ಪ್ರತಿವಾದಿಯ ತಂದೆ ಶೇಷೇಗೌಡರಿಗೆ ಮಾರಾಟ ಮಾಡಿರುತ್ತೇವೆಂದು ನುಡಿದಿರುತ್ತಾರೆ. ಸದರಿ ಸ್ವತ್ತಿನ ಕ್ರಯಪತ್ರವು 4 ನೇ ಪ್ರತಿವಾದಿಯ ಹೆಸರಿಗೆ ನೋಂದಣಿಯಾಗಿರುತ್ತದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಶೇಷೇಗೌಡರು ಕ್ರಯಪತ್ರವನ್ನು ತನ್ನ ಮಗನ ಹೆಸರಿಗೆ ನೋಂದಣಿ ಮಾಡಿಕೊಡುವಂತೆ ಹೇಳಿದ ಕಾರಣ ಅವರ ಹೆಸರಿಗೆ ಕ್ರಯಪತ್ರವನ್ನು ಮಾಡಿಸಿರುತ್ತೇನೆಂದು ನುಡಿದಿರುತ್ತಾರೆ. ಕ್ರಯಪತ್ರದ ಪ್ರತಿಫಲವನ್ನು 4 ನೇ ಪ್ರತಿವಾದಿ ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ನಾವು ಕ್ರಯದ ವ್ಯವಹಾರವನ್ನು ಶೇಷೇಗೌಡರ ಕಡೆಯಿಂದ ಮಾಡಿಕೊಂಡಿದ್ದು , ಹಣವನ್ನೂ ಸಹ ಶೇಷೇಗೌಡರವರೇ ನಮಗೆ ಕೊಟ್ಟಿರುತ್ತಾರೆ.

ಶೇಷೇಗೌಡರವರು ಗುಬ್ಬಿ ತಾಲ್ಲೂಕಿನ ಕಾಳೇಗೌಡನಹಟ್ಟಿ ಗ್ರಾಮದ ವಾಸಿಯಾಗಿರುತ್ತಾರೆ. ನನಗೆ ಶೇಷೇಗೌಡರವರ ಬಗ್ಗೆ ಆಗಲೀ, ಅವರು ಯಾವ ಊರಿನವರೆಂದಾಗಲೀ ಗೊತ್ತಿರುವುದಿಲ್ಲ ಹಾಗೂ ನಾನು ಅವರೊಂದಿಗೆ ಯಾವುದೇ ಕ್ರಯದ ವ್ಯವಹಾರವನ್ನೂ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯದ ವ್ಯವಹಾರವನ್ನು 4 ನೇ ಪ್ರತಿವಾದಿಯೊಂದಿಗೆ ಮಾಡಿದ್ದು, ಕ್ರಯದ ಸಂಪೂರ್ಣ ಮೊಬಲಗನ್ನು 4 ನೇ ಪ್ರತಿವಾದಿಯೇ ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ಶೇಷೇಗೌಡರವರು ಹಣವನ್ನು ಕೊಟ್ಟಿರುವ ಬಗ್ಗೆ ನಮೂದು ಇದೆಯಾ? ಎಂದರೆ ಸಾಕ್ಷಿಯು ನಮೂದು ಇರಬಹುದೆಂದು ನುಡಿದಿರುತ್ತಾರೆ. ನಾನು ಕ್ರಯಪತ್ರದ ವಿಚಾರಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ.

ಸದರಿ ಕ್ರಯಪತ್ರವನ್ನು ನಾನು ನನ್ನ ತಮ್ಮ , ನನ್ನ ಅಣ್ಣ ಹಾಗೂ ನನ್ನ ತಮ್ಮನ ಮಗ ಎಲ್ಲರೂ ಸೇರಿ ಓದಿ ತಿಳಿದುಕೊಂಡು ನಂತರ ನೋಂದಣಿ ಮಾಡಿಕೊಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯಪತ್ರವಾಗುವ ಸಮಯದಲ್ಲಿ ನನ್ನ ಇಬ್ಬರು ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದು , ಅವರ ಪರವಾಗಿಯೂ ನಾನೇ ಸದರಿ ಕ್ರಯಪತ್ರವನ್ನು minor guardian ಆಗಿ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಕ್ರಯಪತ್ರವಾದ ನಂತರ ನಾವು ದಾವಾ 2 ನೇ ಐಟಂ ಸ್ವತ್ತಿನ ಸ್ವಾಧೀನವನ್ನೂ 4 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ, ಸ್ವಾಧೀನದಲ್ಲಿ ನಾವೇ ಇರುತ್ತೇವೆ. ಸದರಿ ಸ್ವತ್ತನ್ನು ಕ್ರಯಕ್ಕೆ ಕೊಂಡ ನಂತರ 4 ನೇ ಪ್ರತಿವಾದಿ ಕೊಳವೆ ಬಾವಿ ಮತ್ತು ವಾಸಕ್ಕೆ ಶೆಡ್ ಹಾಗೂ ಪಂಪು ಹೌಸ್ ನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಕ್ಕೆ ಕೊಂಡ ನಂತರ ದಾವಾ ಐಟಂ ನಂ2 ರಲ್ಲಿ 4 ನೇ ಪ್ರತಿವಾದಿ ತೆಂಗಿನ ಸಸಿಗಳನ್ನೂ ಸಹಾ ನೆಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ನಾವೇ ಹಾಕಿರುತ್ತೇವೆಂದು ನುಡಿದಿರುತ್ತಾರೆ. ನಾವು ತೆಂಗಿನ ಸಸಿಗಳನ್ನು ಸುಮಾರು 15 ವರ್ಷಗಳ ಹಿಂದೆ ನೆಟ್ಟಿರುತ್ತೇವೆ. ನಾನು ಹೇಳುವಂತಹ 15 ವರ್ಷದ ತೆಂಗಿನ ಮರಗಳು ದಾವಾ 2 ನೇ ಐಟಂ ಸ್ವತ್ತಿನಲ್ಲಿರುವುದಿಲ್ಲ ಎಂದರೆ ಸರಿಯಲ್ಲ.

ಸೀಬಣ್ಣ ಅಲಿಯಾಸ್ ಸೀಬೇಗೌಡರವರು ನಮ್ಮ ಊರಿನವರಾಗಿದ್ದು , ನನಗೆ ಅವರ ಪರಿಚಯವಿರುತ್ತದೆ. ಸೀಬಣ್ಣರವರು ನನ್ನ , ನನ್ನ ಅಣ್ಣ , ನನ್ನ ತಮ್ಮ ಹಾಗೂ 4 ನೇ ಪ್ರತಿವಾದಿಯ ವಿರುದ್ಧ ಒಂದು ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಹೂಡಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ನಾನು, ನನ್ನ ಅಣ್ಣ ಹಾಗೂ ನನ್ನ ತಮ್ಮ ಮತ್ತು 4 ನೇ ಪ್ರತಿವಾದಿ ಸೇರಿ ತಕರಾರನ್ನೂ ಸಹ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ, ಸದರಿ ದಾವೆಯನ್ನು ನಾವುಗಳು ಸೇರಿ ಸೀಬಣ್ಣನ ವಿರುದ್ಧ ಸಲ್ಲಿಸಿದ್ದೆವು. ಸದರಿ ದಾವೆಯನ್ನು ನಾವು ಸಲ್ಲಿಸಿರುವುದಿಲ್ಲ ಬದಲಾಗಿ ಸೀಬಣ್ಣರವರು ನಮ್ಮ ವಿರುದ್ಧ ಸಲ್ಲಿಸಿರುತ್ತೇವೆ ಎಂದರೆ ಸರಿ . ಸದರಿ ದಾವೆಯ ನಂ . ಓಎಸ್ 311/2001 ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯನ್ನು,

ಸೀಬೇಗೌಡರವರು ತನ್ನ ಸ್ವತ್ತನ್ನು 4 ನೇ ಪ್ರತಿವಾದಿಗೆ ಕ್ರಯ ಮಾಡಿರುವುದು ತಪ್ಪೆಂದು ಹೇಳಿ, ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸೀಬೇಗೌಡರವರು ಎರಡು ಸ್ವತ್ತುಗಳ ಮೇಲೆ ಸಲ್ಲಿಸಿದ್ದರು. ಆ ದಾವೆಯಲ್ಲಿ ಚಂದ್ರೇಗೌಡರವರು ಪಕ್ಷಗಾರರಾಗಿರುವುದಿಲ್ಲ, ಬದಲಾಗಿ ನಮ್ಮ ಮೇಲೆ ಮಾತ್ರ ದಾವೆಯನ್ನು ಸಲ್ಲಿಸಿದ್ದರು. ಸದರಿ ದಾವೆಯಲ್ಲಿ ಸದರಿ ಸ್ವತ್ತು ನಮ್ಮ ಸ್ವತ್ತೆಂದು ಹೇಳಿ ನಾವು ತಕರಾರನ್ನು ಸಲ್ಲಿಸಿದ್ದೆವು. ಸದರಿ ದಾವೆಗೆ ತಕರಾರನ್ನು ನಮ್ಮ ವಕೀಲರಿಗೆ ಹೇಳಿ ಬರೆಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ತಕರಾರಿನ ಅಂಶಗಳು ನನಗೆ ಗೊತ್ತಿರುವುದಿಲ್ಲ. ಸದರಿ ತಕರಾರಿಗೆ ನಾನು ಸಹಿಯನ್ನು ಮಾಡಿರುವುದಿಲ್ಲ ಮತ್ತು ತಕರಾರನ್ನು ಸಲ್ಲಿಸಲು ನಾನು ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ. ಸೀಬೇಗೌಡರು ಸಲ್ಲಿಸಿದ ದಾವೆಗೆ ಸಲ್ಲಿಸಿದ ತಕರಾರಿಗೆ ಮಾಹಿತಿಯನ್ನು ನಾವೇ ಕೊಟ್ಟಿರುತ್ತೇವೆ ಹಾಗೂ ತಕರಾರಿನ ಅಂಶಗಳನ್ನು ನಾವೇ ಹೇಳಿ ಬರೆಸಿರುತ್ತೇವೆ. ಸದರಿ ತಕರಾರಿನ ಅಂಶಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಅಸಲು ದಾವಾ ಸಂಖ್ಯೆ 311/2001 ರಲ್ಲಿ ನಾವು ಸಲ್ಲಿಸಿದ ತಕರಾರಿನಲ್ಲಿ ಈ ದಾವೆಯ 2 ನೇ ಐಟಂ ಸ್ವತ್ತನ್ನು ಚಂದ್ರೇಗೌಡರಿಗೆ ಮಾರಾಟ ಮಾಡಿದ್ದು , ಸ್ವತ್ತಿನ ಸ್ವಾಧೀನ ಸಹಾ ಚಂದ್ರೇಗೌಡರ ಬಳಿ ಇರುತ್ತದೆಂ ದು ಹೇಳಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ತಕರಾರಿಗೆ ನಾನು, ನನ್ನ ಅಣ್ಣ , ನನ್ನ ತಮ್ಮ ಸಹಿ ಮಾಡಿರುತ್ತೇವೆ ಎಂದರೆ ಹಾಕಿರಬಹುದು. ಸದರಿ ತಕರಾರನ್ನು ನಮ್ಮೆಲ್ಲರ ಪರವಾಗಿ ನನ್ನ ಅಣ್ಣ ಸಲ್ಲಿಸಿದ್ದರು ಎಂದರೆ ಇರಬಹುದು. ಸದರಿ ದಾವೆಯಲ್ಲಿ ನಮ್ಮೆಲ್ಲರ ಪರವಾಗಿ ನನ್ನ ಅಣ್ಣ ವಿಚಾರಣೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಈ ದಾವೆಯ 4 ನೇ ಪ್ರತಿವಾದಿಯ ಪರವಾಗಿಯೂ ಸಹ ತಕರಾರನ್ನು ನಾವೇ ಸಲ್ಲಿಸಿದ್ದು , ಅವರ ಪರವಾಗಿಯೂ ನನ್ನ ಅಣ್ಣ ಸಾಕ್ಷ್ಯವನ್ನು ನುಡಿದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾವು ಮಾಡಿದ ಕ್ರಯಪತ್ರದ ದಾಖಲೆಯನ್ನು ನ್ಯಾಯಾಲಯಕ್ಕೆ ನನ್ನ ಅಣ್ಣ ಹಾಜರುಪಡಿಸಿ, 4 ನೇ ಪ್ರತಿವಾದಿಯ ಪರವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಅಸಲು ದಾವಾ ಸಂಖ್ಯೆ 311/2001 ನಮ್ಮಂತೆ ತೀರ್ಮಾನವಾಗಿರುತ್ತದೆ. ಸದರಿ ದಾವೆಯಲ್ಲಿ ಸೀಬೇಗೌಡರವರನ್ನು ಮಾಲೀಕರೆಂದು, ಸ್ವಾಧೀನದಲ್ಲಿ ನಾವು ಮತ್ತು 4 ನೇ ಪ್ರತಿವಾದಿ ಇರುತ್ತೇವೆಂದು ತೀರ್ಮಾನವಾಗಿರುತ್ತದೆ ಎಂದರೆ ಸಾಕ್ಷಿಯು ನಮ್ಮಂತೆ ತೀರ್ಮಾನವಾಗಿದ್ದು , ಖಾತೆ , ಪಹಣಿ ನಮ್ಮ ಹೆಸರಿಗೆ ಬದಲಾವಣೆಯಾಗಿರುತ್ತದೆಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ 1 ನೇ ಐಟಂ ಸ್ವತ್ತು ನಮ್ಮ ಸ್ವಾಧೀನದಲ್ಲಿ ಹಾಗೂ ಈ ದಾವೆಯ 2 ನೇ ಐಟಂ ಸ್ವತ್ತು 4 ನೇ ಪ್ರತಿವಾದಿಯ ಸ್ವಾಧೀನದಲ್ಲಿರುತ್ತದೆಂದು ತೀರ್ಮಾನವಾಗಿರುತ್ತದೆಂದರೆ ಸರಿಯಲ್ಲ, ಎರಡೂ ಸ್ವತ್ತು ನಮ್ಮ ಸ್ವಾಧೀನದಲ್ಲೇ ಇರುತ್ತದೆ. ಸದರಿ ದಾವೆಯ ತೀರ್ಪಿನ ವಿರುದ್ಧ ಸೀಬೇಗೌಡರವರು ಹಾಗೂ ನಾವು ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿಯು ನಾವು ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆಂದು ನುಡಿದಿರುತ್ತಾರೆ. ಸದರಿ ದಾವೆಯ ತೀರ್ಪಿನ ವಿರುದ್ಧ ಸಲ್ಲಿಸಿದ ಎರಡು ಮೇಲ್ಮವಿಗಳಲ್ಲಿ, ನಾವು ಸಲ್ಲಿಸಿದ ಮೇಲ್ಮನವಿ ಪುರಸ್ಕೃತಗೊಂಡು ನಮ್ಮಂತೆ ತೀರ್ಮಾನವಾಗಿದ್ದು , ಸೀಬೇಗೌಡರವರು ಸಲ್ಲಿಸಿದ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ಎರಡೂ ಮೇಲ್ಮನವಿಗಳು ನಮ್ಮಂತೆಯೇ ಆಗಿರುತ್ತದೆಂದು ನುಡಿದಿರುತ್ತಾರೆ.

ಸೀಬೇಗೌಡರವರು ಅಸಲು ದಾವಾ ಸಂಖ್ಯೆ 311/2001 ರ ಆದೇಶದ ಪ್ರಕಾರ ಈ ದಾವೆಯ 2 ನೇ ಐಟಂ ಸ್ವತ್ತನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಸ್ವತ್ತಿನ ಖಾತೆಯು ಮೇಲ್ಮನವಿಯ ಆದೇಶದ ಪ್ರಕಾರ ಸೀಬೇಗೌಡರವರಿಂದ ನಮ್ಮ ಹೆಸರಿಗೆ ತಪ್ಪಾಗಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ, ನಾವು ಕಾನೂನಿನ ಪ್ರಕಾರ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆ. 4 ನೇ ಪ್ರತಿವಾದಿಯು ನಮ್ಮ ವಿರುದ್ಧ ಮಧುಗಿರಿಯ ಉಪ ವಿಭಾಗಧಿಕಾರಿಗಳ ನ್ಯಾಯಾಲಯದಲ್ಲಿ ನಮ್ಮ ಹೆಸರಿಗೆ ಆಗಿರುವ ಖಾತೆ ಬದಲಾವಣೆಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದು , ಅದು ಇನ್ನೂ ವಿಚಾರಣಾ ಹಂತದಲ್ಲಿದೆ ಎಂದರೆ ಸರಿ . ನಾವು ಕಂದಾಯ ಅಧಿಕಾರಿಗಳಿಗೆ ತಪ್ಪು ಮಾಹಿತಿಯನ್ನು ನೀಡಿ ದಾವಾ 2 ನೇ ಐಟಂ ಸ್ವತ್ತಿನ ಖಾತೆಯನ್ನು ನಮ್ಮ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 311/2001 ರ ಮೇಲ್ಮನವಿಯ ವಜಾ ಆದೇಶದ ವಿರುದ್ಧ ಸೀಬೇಗೌಡರವರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ 2 ನೇ ಮೇಲ್ಮನವಿಯನ್ನು ಸಲ್ಲಿಸಿದ್ದು , ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರ ಸರಿ . ಸದರಿ ಮೇಲ್ಮನವಿಗಳ ವಜಾ ಆದೇಶದ ಪ್ರಕಾರ, ನಾವು ಮಾಡಿರುವ ಕ್ರಯ ಪತ್ರದ ವ್ಯವಹಾರವು ಊರ್ಜಿತವಾಗಿರುತ್ತದೆ ಎಂದರೆ ಸರಿಯಲ್ಲ ನಾವು ಕಾನೂನುಬದ್ಧವಾಗಿ ಕ್ರಯಪತ್ರದ ಪ್ರತಿಫಲದ ಹಣವನ್ನು ಪಡೆದುಕೊಂಡು ಕ್ರಯಪತ್ರವನ್ನು 4 ನೇ ಪ್ರತಿವಾದಿಗೆ ಮಾಡಿಕೊಟ್ಟಿದ್ದರೂ ಸಹ ನಾವು ನಮ್ಮ ಮಕ್ಕಳ ಕಡೆಯಿಂದ ಒಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ದಾವಾ 2 ನೇ ಐಟಂ ಸ್ವತ್ತನ್ನು ನಮ್ಮ ಆರ್ಥಿಕ ತೊಂದರೆ , ಮಕ್ಕಳ ವಿದ್ಯಾಭ್ಯಾಸ ಮತ್ತು ಬ್ಯಾಂಕು ಮತ್ತು ಸೊಸೈಟಿಗಳಲ್ಲಿ ಮಾಡಿದ್ದ ಸಾಲವನ್ನು ತೀರಿಸುವ ಉದ್ಧೇಶದಿಂದ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಮತ್ತು ಸದರಿ ವಿಚಾರವನ್ನು ಕ್ರಯಪತ್ರದಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ ನಾನು ಕುಡಿತದ ಚಟಕ್ಕೆ ಒಳಗಗಿ ಜುಜೂಟವಾಡಿ ದಂಡವನ್ನೂ ಸಹ ಕಟ್ಟಿರುತ್ತೇನೆ. ಈ ಬಗ್ಗೆ ದಾಖಲೆಯನ್ನೂ ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಕುಡುಕನೂ ಅಲ್ಲ, ಜೂಜೂಟ ಆಡುವುದಿಲ್ಲ ಬದಲಾಗಿ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿದ್ದು , 4 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ವಿಚಾರವನ್ನು ನನ್ನ ಮಕ್ಕಳಿಗೆ ಹೇಳಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ 2 ನೇ ಐಟಂ ಸ್ವತ್ತಿನಲ್ಲಿ 4 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದು , ಅದರಲ್ಲಿ ಕೊಳವೆ ಬಾವಿ ಹಾಕಿಸಿ, ತೋಟವನ್ನು ಮಾಡಿ 2 ನೇ ಐಟಂ ಸ್ವತ್ತನ್ನು ಅಭಿವೃದ್ಧಿಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಅದನ್ನೆಲ್ಲಾ ನಾವೇ ಮಾಡಿಸಿರುತ್ತೇವೆಂದು ನುಡಿದಿರುತ್ತಾರೆ. ದಾವಾ 2 ನೇ ಐಟಂನಲ್ಲಿ ಕೊಳವೆ ಬಾವಿ ಕೊರೆಸಿರುವ ಬಗ್ಗೆ ಹಾಗೂ ಅದಕ್ಕೆ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಪಾವತಿ ಮಾಡುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಅಗತ್ಯ ಬಿದ್ದಲ್ಲಿ ಹಾಜರುಪಡಿಸುತ್ತೇನೆ. ನಾನು ಯಾವುದೇ ಕೊಳವೆ

ಬಾವಿಯನ್ನು ಕೊರೆಸಿರುವುದಿಲ್ಲ ಹಾಗೂ ವಿದ್ಯುತ್ ಬಿಲ್ಲವನ್ನು ಪಾವತಿ ಮಾಡದೇ ಇರುವ ಕಾರಣ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ 4 ನೇ ಪ್ರತಿವಾದಿಯ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಕರಾರು ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ

**ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ**
**ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.